# ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹಡಗಲಿ.

**ಸಿ.ಸಿ. ನಂಃ 21/2019**

**ಸಿ.ಡಬ್ಲೂಃ 06 ಪಿಡಬ್ಲೂಃ 05**

ಸಾಕ್ಷಿದಾರರ ಹೆಸರುಃ ಶ್ರೀನಿವಾಸ ತಂದೆಃ ವೆಂಕಪ್ಪ
ವಯಸ್ಸುಃ 49 ವರ್ಷ
ಉದ್ಯೋಗಃ ಕೂಲಿ,
ಸಾಕೀನಃ ಉಪನಾಯಕನಹಳ್ಳಿ.

ದಿಃ **17-03-2026** ರಂದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಭೋಧಿಸಲಾಯಿತು.
ಮುಖ್ಯ ವಿಚಾರಣೆಃ ಸ.ಸ.ಅ ರವರಿಂದ ;

ಆರೋಪಿತರ ಪರಿಚಯ ನನಗೆ ಇರುವುದಿಲ್ಲ, ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ, ಪೊಲೀಸರು ದಾಳಿ ಮಾಡಿ ಯಾವುದೇ ವಸ್ತುಗಳನ್ನು ವಶಪಡಿಸಿಕೊಂಡಿಲ್ಲ, ನಾನು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ, ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ, ಆದರೆ ಸುಮಾರು **7-8** ವರ್ಷಗಳ ಹಿಂದೆ ನಾನು ಹಿರೇಹಡಗಲಿ ಠಾಣೆಯ ಮುಂದೆ ಹೋಗುತ್ತಿದ್ದಾಗ ಪೋಲೀಸರು ಸುಮಾರು ಬೆ. **11.00** ಗಂಟೆಗೆ ನನ್ನನ್ನು ಕರೆದು **2** ದಾಖಲೆಗೆ ನನ್ನ ಸಹಿ ಮಾಡಿರುತ್ತೇಪಡೆದಿರುತ್ತಾರೆ. ಸದರಿ ದಾಖಲೆಗಳಲ್ಲಿ ಬರೆದ ವಿಷಯಗಳ ಬಗ್ಗೆ ನನಗೆ ಮಾಹಿತಿ ಇಲ್ಲ, ಪೊಲಪೀಸರ ಕೋರಿಕೆಯ ಮೇರೆಗೆ ಸಹಿ ಮಾಡಿದ್ದೇನು ಎಂದು ಸಾಕ್ಷಿ ನುಡಿಯುತ್ತಾರೆ. ಸಾಕ್ಷಿ ಸಹಿ ಇರುವ ದಾಖಲೆಗಳು ನಿ.ಪಿ.**01** ರ ಕೃತ್ಯ ಸ್ಥಳದ ಜಪ್ತು ಪಂಚೆನಾಮೆ ಮತ್ತು ಕಚ್ಛಾ ನಕಾಶೆಗಳು ಅಗಿದ್ದು, ಸಾಕ್ಷಿಯು ಅವುಗಳಲ್ಲಿರುವ ತನ್ನ ಸಹಿಗಳನ್ನು ನೋಡಿ ಗುರುತಿಸಿದ್ದರಿಂದ ಸಾಕ್ಷಿಯ ಸಹಿಗಳನ್ನು ನಿಪಿ-**01** ಬಿ. ಮತ್ತು **2** ಬಿ. ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುದ್ದೆಮಾಲುಗಳನ್ನು ಗುರುತಿಸಲಾಗುವುದಿಲ್ಲ.

*(ಈ ಹಂತದಲ್ಲಿ ಸ.ಸ.ಅ.ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದಾರೆ. ಆಲಿಸಿ ಅನುಮತಿ ನೀಡಲಾಯಿತು.)*

ಪಾಟೀ ಸವಾಲುಃ ಸ.ಸ.ಅ ರವರಿಂದ ;

**02.** ದಿನಾಂಕ :**27-08-2017** ರಂದು ಮಾನ್ಯರ ಮಸಲವಾಡ ಗ್ರಾಮದಲ್ಲಿ ವಡ್ಡರ ಓಣಿಯಲ್ಲಿಯ ಸಾರ್ವಜನಿಕ ಟ್ಯಾಂಕನ ಮುಂದಿನ ಸಾರ್ವಜನಿಕ ಸ್ಥಳದಲಿ ನನ್ನ ಮತ್ತು

ಚಾ.ಸಾ.**04** ರವರು ನನ್ನನ್ನು ಮತ್ತು ಚಾ.ಸಾ.**07** ರವರನ್ನು ಕರೆದು ಚಾ.ಸಾ.**01** ರವರ ಮುಂದೆ ಹಾಜರುಪಡಿಸಿದ್ದು ಚಾ.ಸಾ.**01** ರವರು ಎಮ್.ಎಮ್.ವಾಡಾ ಗ್ರಾಮದ ವಡ್ಡರ ಓಣಿಯ ಸಾರ್ವಜನಿಕ ಟ್ಯಾಂಕನ ಮುಂದಿನ ಸಾರ್ವಜನಿಕ ಸ್ಥಳದಲಿ ಅರೋಪಿತರು ಅಕ್ರಮ ಮದ್ಯವನ್ನು ಮಾರಾಟ ಮಾಡುತ್ತಿರುವ ಕುರಿತು ಬಾತ್ಮಿ ಬಂದಿರುತ್ತದೆ ಪಂಚರಾಗಿ ಸಹಕರಿಸಬೇಕು ಎಂದು ಕೇಳಿಕೊಂಡ ಮೇರೆಗೆ ನಾವು ದಾಳಿಗೆ ಹೋಗಲು ಒಪ್ಪಿದ್ದರಿಂದ ಚಾ.ಸಾ.**1** ಮತ್ತು ಅವರ ಸಿಬ್ಬಂಧಿಗಳು ನಮ್ಮನ್ನು ಕರೆದುಕೊಂಡು ಹೋಗಿ ನಮ್ಮ ಸಮಕ್ಷಮ ಸಂಜೆ. **05.45** ಗಂಟೆಗೆ ಅಕ್ರಮ ಮಧ್ಯ ಮಾರಾಟ ಮಾಡುತ್ತಿರುವವರ ಮೇಲೆ ದಾಳಿ ಮಾಡಲಾಗಿ ಅವರು ಪರಾರಿಯಾಗಿರುತ್ತಾರೆ. ಆ ಸಮಯದಲ್ಲಿ ಹಸಿರು ಬಣ್ಣದ ಕೈಚೀಲವನ್ನು ಬಿಟ್ಟು ಹೋಗಿದ್ದು ಅದನ್ನು ನಮ್ಮ ಸಮಕ್ಷಮ ಪರಿಶೀಲಿಸಿ ನೋಡಲಾಗಿ **180** ಎಮ್.ಎಲ್.ನ ರಾಜಾ ವಿಸ್ಕೀಯ **20** ಗಾಜಿನ ಬಾಟಲಗಳು ಮತ್ತು **90** ಎಮ್.ಎಲ್.ನ ಬೆಂಗಳೂರು ಮಾಲ್ಟ್ ವಿಸ್ಕೀಯ **18** ಟೆಟ್ರಾಪ್ಯಾಕಗಳು ದೊರೆತಿದ್ದವು, ಸದರಿ ಮಧ್ಯದ ಬಾಟಲಗಳನ್ನು ನಮ್ಮ ಸಮಕ್ಷಮ ಸಂಜೆ.**06.00** ರಿಂದ **07.00** ಗಂಟೆಯವರೆಗೆ ಸ್ಥಳದಲ್ಲಿಯೇ ಪಂಚನಾಮೆ ಜರೂಗಿಸಿ ಅಮಾನತ್ತು ಪಡೆಸಿಕೊಂಡು ಚೀಲದಲ್ಲಿ ಹಾಕಿ **SHO** ಅಂತ ಸೀಲು ಮಾಡಿ ನನ್ನ ಮತ್ತು ಚಾ.ಸಾ.**01** ರವರು ಸಹಿಯುಳ್ಳ ಚೀಟಿಯನ್ನು ಅಂಟಿಸಿರುತ್ತಾರೆ ಎಂರದೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆ ಸಮಯದಲ್ಲಿ ನಿ.ಪಿ.**01** ಕ್ಕೆ ಸ್ಥಳದಲ್ಲಿ ಸಹಿ ಪಡೆದು ನಿ.ಪಿ.**02** ರಂತೆ ಕಚ್ಚಾ ನಕಾಶೆ ತಯಾರಿಸಿ ಸ್ಥಳದಲ್ಲಿ ಸಹಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿತರು ನಮ್ಮ ಊರಿನವನು ಅಗಿದ್ದರಿಂದ ಮತ್ತು ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ, " ನನ್ನ ಸಮಕ್ಷಮ "

**Sd/-**

(ಶ್ರೀಮತಿ ಅಕ್ಷತಾ ಟಿ.)
ದಿವಾಣಿ ನ್ಯಾಯಾಧೀಶರು ಮತ್ತು ನ್ಯಾಯಿಕ
ದಂಡಾಧಿಕಾರಿಗಳು., ಹಡಗಲಿ.